ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ., ಯವರ ನ್ಯಾಯಾಲಯ,
ಕುಂದಾಪುರ

ಸಿ.ಸಿ. ನಂಬ್ರಃ 111/2024
ಪ್ರಾ ಸಾಃ 01

| | | |
|---|---|---|
| ವಾಗ್ಮೂಲದವರ ಹೆಸರು | : | ಆನಂದ ಬಿ, |
| ತಂದೆಯ ಹೆಸರು | : | ನಾರಾಯಣ, |
| ವಯಸ್ಸು | : | 52 ವರ್ಷ |
| ಉದ್ಯೋಗ | : | ಎ ಎಸ್ ಐ , ಕುಂದಾಪುರ ಪೊಲೀಸ್ ಠಾಣೆ |
| ವಾಸ ಸ್ಥಳ | : | ಕುಂದಾಪುರ. |

ದಿನಾಂಕಃ 16-07-2024 ರಂದು ಸಾಕ್ಷಿಯನ್ನು ಪ್ರಮಾಣೀಕರಿಸಲಾಯಿತು.

ಭಾ. ದಂ. ಪ್ರ, ಸಂ, ಕಲಂ 299 ಸಿಆರ್.ಪಿ.ಸಿ ರಡಿಯಲ್ಲಿ ವಿಚಾರಣೆಃ ನ್ಯಾಯಾಲಯದ ವತಿಯಿಂದಃ

ನಾನು ಕುಂದಾಪುರ ಪೊಲೀಸ್ ಠಾಣೆಯಲ್ಲಿ 05 ವರ್ಷಗಳಿಂದ ಎ ಎಸ್ ಐ., ಆಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

ಈ ಪ್ರಕರಣದಲ್ಲಿ ಮಾನ್ಯ ನ್ಯಾಯಾಲಯದಿಂದ ಒಂದು ಉದ್ಘೋಷಿತ ವಾರಂಟನ್ನು ಆರೋಪಿ ಸುಧಾಕರ ಪೂಜಾರಿ ಎಂಬುವರ ವಿರುದ್ದ ಹೊರಡಿಸಿದ್ದು, ಅದನ್ನು ನಾನು ಪಡೆದುಕೊಂಡು ದಿಃ 27-09-2022 ರಂದು ಕುಂದಾಪುರದ ಹಗಲ್ಗುಡ್ಡ ರಸ್ತೆ, ಹಳವಳ್ಳಿ ಗ್ರಾಮ ಕೋಟೇಶ್ವರದ ಸಾರ್ವಜನಿಕ ಬಸ್ ನಿಲ್ದಾಣಕ್ಕೆ ಭೇಟಿ ನೀಡಿದ್ದು, ಅಲ್ಲಿನ ಸಾರ್ವಜನಿಕರನ್ನು ವಿಚಾರಿಸಲಾಗಿದ್ದು, ಆರೋಪಿಯ ಬಗ್ಗೆ ಯಾವುದೇ ವಿಚಾರಗಳು ಗೊತ್ತಾಗದೆ ತಲೆಮರೆಸಿಕೊಂಡಿರುವುದಾಗಿ ತಿಳಿದು ಬಂದಿರುತ್ತದೆ. ಆ ಕಾರಣದಿಂದ ನಾನು ದಿಃ 29-10-2022 ರ ಒಳಗೆ ನ್ಯಾಯಾಲಯಕ್ಕೆ ಹಾಜರಾಗಬೇಕೆಂದು ಹೇಳಿ ಟಾಂ ಟಾಂ ಮೂಲಕ ಪ್ರಚಾರ ಪಡಿಸಿದ್ದು, ನಂತರ ಉದ್ಘೋಷಿತ ವಾರಂಟಿನ ಒಂದು ಪ್ರತಿಯನ್ನು ಆರೋಪಿಯ

ವಿಳಾಸದ ಮನೆಗೆ, ಇನ್ನೊಂದು ಪ್ರತಿಯನ್ನು ಹಳವಳ್ಳಿ ಗ್ರಾಮದ ಸಾರ್ವಜನಿಕ ಬಸ್ ನಿಲ್ದಾಣದ ಗೋಡೆಗೆ ಅಂಟಿಸಿ ಜಾರಿ ಮಾಡಿರುತ್ತೇನೆ, ನಂತರ ಸ್ಥಳದಲ್ಲಿ ಉದ್ಘೋಷಿತ ಮಹಜರನ್ನು ಬೆಳಿಗ್ಗೆ 11.45 ರಿಂದ 12.15 ಗಂಟೆಯವರೆಗೆ ಪಂಚರ ಸಮಕ್ಷಮ ತಯಾರಿಸಿ ವಾಸು ಪೂಜಾರಿ ಮತ್ತು ಶಿವರಾಮ ಕೆ ರವರ ಪಂಚರ ಸಹಿಯನ್ನು ಪಡೆದುಕೊಂಡಿರುತ್ತೇನೆ. ನಂತರ ಉದ್ಘೋಷಿತ ಪಂಚನಾಮೆ ಹಾಗೂ ವಾರಂಟನ ಪ್ರತಿಯನ್ನು ನ್ಯಾಯಾಲಯಕ್ಕೆ ನಿವೇದಿಸಿಕೊಂಡಿರುತ್ತೇನೆ. ಸಾಕ್ಷಿ ಈ ದಿನ ಉದ್ಘೋಷಿತ ಪಂಚನಾಮೆಯನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ-1 ಎಂದು ಗುರುತಿಸಲಾಯಿತು. ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ತಹಶೀಲ್ದಾರವರು ನೀಡಿದ ವರದಿಯನ್ನು ನಿಪಿ-2 ಎಂದು ಗುರುತಿಸಲಾಯಿತು.

ಆರೋಪಿ ತಲೆಮರೆಸಿಕೊಂಡಿದ್ದರಿಂದ ಪಾಟೀ ಸವಾಲು ಇಲ್ಲ ಎಂದು ಪರಿಗಣಿಸಲಾಯಿತು

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓದಿ ಹೇಳಿ ಕೇಳಿ ಸರಿ ಇದೆ

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರ. ದ. ನ್ಯಾ. ದಂ. ಕುಂದಾಪುರ